| 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು |
|---|

ಎಸ್ ಸಿ 121/2019

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ನಾರಾಯಣಸ್ವಾಮಿ | ಫ್ರಾಸಾ | 2 |
| ತಂದೆ ಹೆಸರು | ಃ | ಲೇಟ್ ತಿಮ್ಮೇಗೌಡ | ಚಾಸಾ | 2 |
| ವಯಸ್ಸು | ಃ | 54 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ ಃ 28.07.2023 | |
| ವೃತ್ತಿ | ಃ | ವ್ಯವಸಾಯ | | |
| ವಾಸ ಸ್ಥಳ | ಃ | ಕುಂಬಾರಕೊಪ್ಪಲು ಮೈಸೂರು | | |

**ಮುಖ್ಯ ವಿಚಾರಣೆ ಃ ಸರಕಾರಿ ಅಭಿಯೋಜಕರವರಿಂದ ಃ**

1. ಆರೋಪಿಗಳನ್ನು ನೋಡಿದ್ದೇನೆ. ಚಾಸಾ 1 , 3, 4, 10 ರಿಂದ 17 ಗೊತ್ತು. ನಾನು ವ್ಯವಸಾಯ ಮಾಡುತ್ತೇನೆ.

2. ದಿಃ 13.09.2018 ರಂದು ನಮ್ಮ ಮನೆ ಹತ್ತಿರ ಇರುವ ಸೈಟ್ ಜಾಗದಲ್ಲಿ ಚಿಕ್ಕ ಹುಡುಗರು ಗಣಪತಿಯನ್ನು ಇಟ್ಟಿದ್ದರು. ಆ ದಿನ ಸಂಜೆ 6 ಗಂಟೆ ನಂತರ ಆರೋಪಿತರೆಲ್ಲರೂ ಆ ಸ್ಥಳಕ್ಕೆ ಬಂದು ಗಲಾಟೆಯನ್ನು ಮಾಡುತ್ತಿದ್ದರು. ಆಗ ನಾನು ಆರೋಪಿತರಿಗೆ ಏಕೆ ಗಲಾಟೆ ಮಾಡುತ್ತೀರಿ ಮಾಡಬೇಡಿ ಅಂತ ಬುದ್ದಿ ಮಾತನ್ನು ಹೇಳಿದಾಗ ಆರೋಪಿತರು ಅದನ್ನು ಕೇಳೋಕೆ ನೀನು ಯಾರು ಅಂತ ನನ್ನ ಮೇಲೆಯೇ ಗಲಾಟೆ ಮಾಡಿರುತ್ತಾರೆ. ನಂತರ ನಾನು ನಮ್ಮ ಜಾಗದಲ್ಲಿರುವ ನನ್ನ ಕಛೇರಿಗೆ ಬಂದು ಕುಳಿತುಕೊಂಡೆನು. ಕಾವೇರಿ ನಗರದಿಂದ ಬೆಳವತ್ತಕ್ಕೆ ಹೋಗುವ ರಸ್ತೆಯಲ್ಲಿ ನನ್ನ ಕಛೇರಿ ಇರುತ್ತದೆ.

3. ಅದೇ ದಿನ 7 ಗಂಟೆ ಸಮಯದಲ್ಲಿ ಗಣಪತಿಯನ್ನು ಬಿಡಲು ನನ್ನ ಕಛೇರಿಯ ಮುಂಭಾಗದಲ್ಲಿ ತೆಗೆದುಕೊಂಡು ಹೋಗಿರುತ್ತಾರೆ. ಅದೇ ದಿನ 8.15 ಗಂಟೆ ಸಮಯದಲ್ಲಿ ಆರೋಪಿ 1 ಮತ್ತು 2 ರವರು ಆರೋಪಿ 1 ರವರ ಆಟೋದಲ್ಲಿ ನಮ್ಮ ಕಛೇರಿಯ ಎದುರುಗಡೆ ಇರುವ ಲೈಟ್ ಕಂಬದ ಹತ್ತಿರ ಬಂದು ನಿಂತರು. ಆನಂತರ ಆರೋಪಿ 3 ರಿಂದ 5 ರವರು 5 ನೇ ಆರೋಪಿಗೆ ಸೇರಿದ ಐ 10 ಕಾರಿನಲ್ಲಿ ಅಲ್ಲಿಗೆ

ಬಂದಿರುತ್ತಾರೆ. ನಂತರ 5 ಜನ ಆರೋಪಿತರು ನನ್ನ ಕಛೇರಿ ಬಳಿ ಬಂದು ಕೂಗಾಡಿರುತ್ತಾರೆ. ಅದಕ್ಕೆ ನಾನು ಈ ದಿನ ಹಬ್ಬ ಇದೆ ನಾಳೆ ಮಾತನಾಡುವ ಅಂತ ಆರೋಪಿತರಿಗೆ ಹೇಳಿರುತ್ತೇನೆ. ನಂತರ ಅವರು ಸುತ್ತುವರಿದು ನನ್ನ ಮೇಲೆ ಗಲಾಟೆ ಮಾಡಲು ಪ್ರಾರಂಭಿಸಿದರು. ಆನಂತರ 3 ನೇ ಆರೋಪಿಯು ಕೈಯಿಂದ ನನ್ನ ಕಪಾಳಕ್ಕೆ ಹೊಡೆದಿರುತ್ತಾನೆ. ಅಂತೆಯೇ ಆರೋಪಿ 2 ಮತ್ತು 4 ರವರು ಕೈಗಳಿಂದ ನನ್ನ ಹೊಟ್ಟೆಗೆ ಗುದ್ದಿರುತ್ತಾರೆ.

4. ನಂತರ 2 ನೇ ಆರೋಪಿಯು ಬಂದು ಇವನನ್ನು ಮುಗಿಸಿಬಿಡೋಣ ಅಂತ ಹೇಳಿ ಕೂಗಿಕೊಂಡಿರುತ್ತಾನೆ. 5 ನೇ ಆರೋಪಿಯು ಬಂದು ಚಾಕುವಿನಿಂದ ನನ್ನ ಬಲಭಾಗದ ಹೊಟ್ಟೆಗೆ ಚುಚ್ಚಲು ಬಂದಾಗ ನಾನು ತಿರುಗಿಕೊಂಡಿದ್ದಕ್ಕೆ ಬಲಭಾಗದ ನಟಕ್ಕೆ ಚುಚ್ಚಿರುತ್ತಾನೆ. ಆ ಜಾಗದಲ್ಲಿ ನನಗೆ ರಕ್ತಗಾಯವಾಗಿರುತ್ತದೆ.

5. 1 ನೇ ಆರೋಪಿಯು ಲಾಂಗ್ ನ್ನು ತೆಗೆದುಕೊಂಡು ನನ್ನ ಕತ್ತಿಗೆ ಹೊಡೆದಿರುತ್ತಾನೆ. ಅದರಿಂದ ನನಗೆ ಕತ್ತಿಗೆ ರಕ್ತಗಾಯವಾಗಿರುತ್ತದೆ. (ಸಾಕ್ಷಿಯು ಕುತ್ತಿಗೆ ಮೇಲೆ ಆದ ಗಾಯವನ್ನು ನ್ಯಾಯಾಲಯಕ್ಕೆ ತೋರಿಸಿದ್ದು ಗಾಯ ವಾಸಿ ಆಗಿರುವ ಗುರುತು ಕಂಡುಬಂದಿರುತ್ತದೆ). 1 ನೇ ಆರೋಪಿಯು ಕತ್ತಿಗೆ ಲಾಂಗ್ ನಿಂದ ಹೊಡೆಯುವಾಗ ನನ್ನ ಎಡಗೈಯನ್ನು ಕೊಟ್ಟೆನು. ಆಗ ನನ್ನ ಎಡಗೈಗೆ ಲಾಂಗ್ ನ 4-5 ಏಟುಗಳು ಬಲವಾಗಿ ಬಿದ್ದಿರುತ್ತವೆ. ಎಡಗೈಯ ಎರಡು ನರಗಳು ಕಟ್ ಆಗಿ ಎಡಗೈ ಓಪನ್ ಆಗಿ ರಕ್ತಗಾಯವಾಗಿರುತ್ತದೆ.

6. ಈ ರೀತಿ ನನಗೆ ಏಟಾದ ನಂತರ ನಾನು ಕುಸಿದು ಬಿದ್ದಿರುತ್ತೇನೆ. ಆ ಗಲಾಟೆ ಆಗುವ ಸಮಯದಲ್ಲಿ ಚಾಸಾ 1 , 11 , 12 ರವರು ಜೊತೆಗೆ ಇತರೆಯವರು ಇದ್ದರು. ಗಲಾಟೆ ಆದಾಗ ಸಮಯ 8.15 ಆಗಿದ್ದರಿಂದ ಗಲಾಟೆ ಆದ ಸಮಯದಲ್ಲಿ ರಸ್ತೆಗೆ

ಫೋಕಸ್ ಲೈಟನ್ನು ಹಾಕಿದ್ದರು ಮತ್ತು ಗಣಪತಿ ಹಬ್ಬ ಇದ್ದುದ್ದರಿಂದ ಲೈಟನ್ನು ಬಿಟ್ಟಿದ್ದರು. ಆ ಲೈಟಿನ ಬೆಳಕಿನಲ್ಲಿ ಯಾವ ಯಾವ ಆರೋಪಿತರು ಯಾವ ರೀತಿ ಕೃತ್ಯವನ್ನು ಎಸಗಿರುತ್ತಾರೆ ಎನ್ನುವುದನ್ನು ನಾನು ಕಣ್ಣಾರೆ ನೋಡಿರುತ್ತೇನೆ. ನಾನು ಧರಿಸಿದ್ದ ಶರ್ಟು , ಪ್ಯಾಂಟು ರಕ್ತವಾಗಿತ್ತು. ನಾನು ಎಡಗೈಗೆ ಕಟ್ಟಿದ್ದ ವಾಚ್ ಏಟಾಗಿದ್ದರಿಂದ ಕಟ್ ಆಗಿ ಕೆಳಗಡೆ ಅಲ್ಲೇ ಬಿದ್ದು ಹೋಗಿರುತ್ತದೆ. ನನಗೆ ಏಟಾದ ಮೇಲೆ ಕುಸಿದು ಬಿದ್ದ ಸ್ಥಳದಲ್ಲಿ ರಕ್ತವಾಗಿರುತ್ತದೆ.

7. ನನಗೆ ಏಟಾದ ನಂತರ ಜನರು ಸೇರಿದ್ದರಿಂದ ಆರೋಪಿ 1 ಮತ್ತು 2 ರವರು ಆ ಸ್ಥಳದಿಂದ ಓಡಿ ಹೋಗಿರುತ್ತಾರೆ ಮತ್ತು ಆರೋಪಿ 3 ರಿಂದ 5 ರವರು ಕಾರಿನಲ್ಲಿ ಹೊರಟು ಹೋದರು. ಆರೋಪಿ 1 ಮತ್ತು 2 ರವರು ತಂದಿದ್ದ ಆಟೋವನ್ನು ಅಲ್ಲೇ ಬಿಟ್ಟು ಓಡಿಹೋಗಿರುತ್ತಾರೆ. ಆಟೋಗೆ ರಕ್ತ ಹತ್ತಿತ್ತು. ಅಂತೆಯೇ ನನ್ನ ಚಪ್ಪಲಿಗಳಿಗೂ ರಕ್ತವಾಗಿತ್ತು. ಅವು ಸ್ಥಳದಲ್ಲೇ ಇದ್ದವು.

8. ಆರೋಪಿತರು ತಾವು ತಂದಿದ್ದ ಆಯುಧವನ್ನು ತೆಗೆದುಕೊಂಡು ಹೋಗಿರುತ್ತಾರೆ. ನನಗೆ ಏಟಾದ ಮೇಲೆ ಚಾಸಾ 1 ರವರು ಚಾಸಾ 16 ರವರ ವ್ಯಾನ್ ನಲ್ಲಿ ನನ್ನನ್ನು ಹಾಕಿರುತ್ತಾರೆ. ಆನಂತರ ಚಾಸಾ 16 ರವರು ನನ್ನನ್ನು ಕರೆದುಕೊಂಡು ಕೊಲಂಬಿಯ ಏಷ್ಯಾ ಆಸ್ಪತ್ರೆಗೆ ಬಂದಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ನನ್ನ ಕೈಗೆ ವೈದ್ಯರು ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ.

9. ಮಾರನೇ ದಿನ ಅಂದರೆ ದಿಃ 14.09.2018 ರಂದು ಪೊಲೀಸರು ಆಸ್ಪತ್ರೆಗೆ ಬಂದಿರುತ್ತಾರೆ. ಪೊಲೀಸರು ಬಂದು ನನ್ನನ್ನು ಕೇಳಿದಾಗ ಹಿಂದಿನ ದಿನ ಯಾವ ರೀತಿ ಗಲಾಟೆ ಆಯಿತು ಎನ್ನುವ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ನಾನು ಪೊಲೀಸರಿಗೆ ಹೇಳಿಕೆ ಕೊಡುವ ಸಮಯದಲ್ಲಿ ವೈದ್ಯರೂ ಸಹ ಇದ್ದರು. ರಕ್ತ ಹತ್ತಿದ ನನ್ನ ಪ್ಯಾಂಟ್ , ಶರ್ಟು ಮತ್ತು ಅಂಡರ್ ವೇರ್ ಗಳನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ.

10. ನಾನು ಆಸ್ಪತ್ರೆಯಲ್ಲಿ 8-10 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ.

11. ದಿಃ 11.10.2018 ರಂದು ನಾನು ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ. ನಾನು ಮುಖ್ಯ ವಿಚಾರಣಾ ಸಾಕ್ಷಿಯಲ್ಲಿ ಹೇಳಿರುವ ಅಂಶಗಳನ್ನು ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆಯಲ್ಲಿ ಹೇಳಿದ್ದೇನೆ. ಸಾಕ್ಷಿಯು ಆ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ 9 ಎಂದು ಸಾಕ್ಷಿಯ ಸಹಿಯನ್ನು ನಿಪಿ 9 ಎ ಎಂದು ಗುರುತಿಸಲಾಯಿತು. ನಿಪಿ 9 ನ್ನು ಟೈಪ್ ಮಾಡಿದ ನಂತರ ಅದರಲ್ಲಿ ಏನು ಬರೆದಿದೆ ಎನ್ನುವ ಅಂಶಗಳನ್ನು ನನಗೆ ಓದಿ ಹೇಳಿರುತ್ತಾರೆ.

12. ಚಾಸಾ 11 ಮತ್ತು 12 ರವರು ಸಹ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ನೀಡಿದ್ದಾರೆ.

13. ದಿಃ 12.10.2018 ರಂದು ಪೊಲೀಸರು ನನಗೆ ಮಧ್ಯಾಹ್ನ 2 ಗಂಟೆಗೆ ಕರೆ ಮಾಡಿ ಆರೋಪಿತರನ್ನು ಕರೆದುಕೊಂಡು ಬಂದಿದ್ದೇವೆ , ನೀವು ಜವರಮ್ಮ ನವರ ಮಾವಿನ ತೋಟದ ಬಳಿ ಬನ್ನಿ ಎಂಬುದಾಗಿ ಹೇಳಿರುತ್ತಾರೆ. ಆಗ ನಾನು , ಚಾಸಾ 8 ರಿಂದ 10 ರವರು ಕಾರಿನಲ್ಲಿ ಅಲ್ಲಿಗೆ ಹೋಗಿರುತ್ತೇವೆ. ಜವರಮ್ಮ ನವರ ಮಾನವಿನ ತೋಪಿನಲ್ಲಿ ಇದ್ದ ಕೃತ್ಯಕ್ಕೆ ಬಳಸಿದ ಕಾರನ್ನು 5 ನೇ ಆರೋಪಿಯು ಪೊಲೀಸರಿಗೆ ತೋರಿಸಿರುತ್ತಾನೆ. ಅದನ್ನು ನಾನು ನೋಡಿ ಗಲಾಟೆಗೆ ಬಳಸಿದ ಕಾರು ಎಂಬುದಾಗಿ ಗುರುತಿಸಿರುತ್ತೇನೆ. ನಂತರ ಪೊಲೀಸರು ಆ ಕಾರಿನ ಡಿಕ್ಕಿಯನ್ನು ತೆಗೆದು ನೋಡಿದಾಗ ಅದರಲ್ಲಿ ಚಾಕು ಇತ್ತು. ಆ ಚಾಕುವನ್ನು 5 ನೇ ಆರೋಪಿಯು ಪೊಲೀಸರಿಗೆ ತೆಗೆದುಕೊಟ್ಟಿರುತ್ತಾನೆ. ಪೊಲೀಸರು ಆ ಚಾಕುವನ್ನು ತೆಗೆದುಕೊಂಡು ಫೋಟೋವನ್ನು ಹೊಡೆದುಕೊಂಡಿರುತ್ತಾರೆ.

14. ಪೊಲೀಸರು ಈ ಬಗ್ಗೆ ಬರೆದುಕೊಂಡು ನನ್ನ ಸಹಿ ಪಡೆದಿರುತ್ತಾರೆ. ಮಹಜರ್ ನ್ನು ನಿಪಿ 10 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ 10ಎ ಎಂದು ಗುರುತಿಸಲಾಯಿತು. ಮಾವಿನ ತೋಪಿನಲ್ಲಿ ತೆಗೆದ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಫೋಟೋಗಳನ್ನು ಗುರುತಿಸಿದ್ದು ಅವನ್ನು ನಿಪಿ 11 ರಿಂದ ನಿಪಿ 20 ಎಂದು ಗುರುತಿಸಲಾಯಿತು.

15. ಆರೋಪಿ 1 ಮತ್ತು 2 ರವರು ತಂದಿದ್ದ ಆಟೋವನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಕೃತ್ಯಕ್ಕೆ ಬಳಸಿದ ಲಾಂಗನ್ನು ಮತ್ತು ಚಾಕು ವನ್ನು ನೋಡಿದರೆ ಗುರುತಿಸುತ್ತೇನೆ. ಲಾಂಗ್ ಮಚ್ಚು ಮತ್ತು ಮುಚ್ಚಳವಿರುವ ಚಾಕುವನ್ನು ಈಗಾಗಲೇ ಮು.ಮಾ 1 ಮತ್ತು 2 ಎಂದು ಗುರುತಿಸಲಾಗಿದೆ. ರಕ್ತ ಮಿಶ್ರಿತ ಮಣ್ಣು , ಸಾದಾ ಮಣ್ಣು , ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ 3 ಮತ್ತು 4 ಎಂದು ಗುರುತಿಸಲಾಗಿದೆ. ಚಾಸಾ 1 ರವರು ಧರಿಸಿದ್ದ ರಕ್ತಸಿಕ್ತವಾದ ಬಿಳಿ ಬಣ್ಣದ ಟೀ ಶರ್ಟನ್ನು, ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ 5 ಎಂದು ಗುರತಿಸಲಾಗಿದೆ. ಸಾಕ್ಷಿಯು ಒಂದು ಸ್ಟೀಲ್ ಸ್ಪೂನನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ 6 ಎಂದು ಗುರತಿಸಲಾಗಿದೆ. ಸಾಕ್ಷಿಯು ತನ್ನ ಟೈಟಾನ್ ವಾಚ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ 7 ಎಂದು ಗುರತಿಸಲಾಗಿದೆ. ಸಾಕ್ಷಿಯು ಅಂದು ಹಾಕಿದ್ದ ಒಂದು ಜೊತೆ ಚಪ್ಪಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ 8 ಎಂದು ಗುರತಿಸಲಾಗಿದೆ.

16. ಈ ಹಂತದಲ್ಲಿ ಪಿಪಿ ಯವರ ವಿನಂತಿ ಮೇರೆಗೆ ಪಿಎಫ್ ಸಂಖ್ಯೆ 90/2018 ರಲ್ಲಿ ನಮೂದಿಸಿರುವ ಸೀಲಾದ ಒಂದು ಬಿಳಿ ಬ್ಯಾಗನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು

ಸಾಕ್ಷಿಗೆ ತೋರಿಸಿ ಅವರು ಗುರುತಿಸಿದ ಮೇರೆಗೆ ಪ್ಯಾಂಟ್ , ಶರ್ಟು, ಒಂದು ತುಂಡು ಬಟ್ಟೆ ಮತ್ತು ಅಂಡರ್ ವೇರನ್ನು ಒಟ್ಟಾಗಿ ಮು.ಮಾ 9 ಎಂದು ಗುರುತಿಸಲಾಯಿತು.

17. ನಿಪಿ 4 ರಿಂದ 7 ರಲ್ಲಿರುವ ಆಟೋವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಪಿ 4 ರಿಂದ 7 ರಲ್ಲಿರುವ ಸ್ಥಳವು ನನ್ನ ಕಛೇರಿಯ ಮುಂಭಾಗ ಕೃತ್ಯ ನಡೆದ ಸ್ಥಳವಾಗಿರುತ್ತದೆ. ಈಗ ನನ್ನ ಎಡಗೈಯಿಂದ ಕೆಲಸವನ್ನು ಮಾಡಲು ಆಗುವುದಿಲ್ಲ. ನನ್ನ ಬಲಭಾಗದ ಸೊಂಟದಲ್ಲಿ ಆದ ಗಾಯದ ಸಣ್ಣ ಗುರುತು ಇರುತ್ತದೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿರುತ್ತಾರೆ

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು